ಮಲಗಿದ್ದಾಳೆ. ಡೆಂಗ್ಯೂ ಇರಬಹುದೇನೋ ಎನ್ನುವ ಅನುಮಾನ. ಸ್ನಾನ ಮಾಡಿದ ಮೇಲೆಯೇ ಅಡುಗೆ ಮಾಡಿ ಊಟ ಬಡಿಸುತ್ತಿದ್ದವಳು ಆಕೆ. ಈಗ ಸ್ನಾನವೂ ಇಲ್ಲ ಅಡುಗೆಯೂ ಇಲ್ಲ. ಮಗಳದ್ದು ಬೇರೆಯೇ ಕಥೆ. ನಾವೆಲ್ಲ ಆಕೆಯ ಮಗು ಗಂಡು ಅಂದುಕೊಂಡಿದ್ದೆವು. ಹತ್ತು ವರ್ಷವಾಗುತ್ತಲೇ ಈಗದು ಹೆಣ್ಣಿನ ಹಾಗೆ ವರ್ತಿಸುತ್ತಿದೆಯಂತೆ. ಇಲ್ಲೆಲ್ಲ ತೋರಿಸಿಯಾಯ್ತು. ಬೆಂಗಳೂರಿನಲ್ಲೋ ಚೆನ್ನೈಯಲ್ಲೋ ಸ್ಪೆಶಲಿಸ್ಟ್ ಡಾಕ್ಟರರಿಗೆ ತೋರಿಸಬೇಕಂತೆ. ಅವಳ ಗಂಡನಿಗೆ ಕಿವಿ ಸರಿ ಕೇಳಿಸುವುದಿಲ್ಲ, ದಟ್ಟ ವಾಹನಸಂಚಾರ ಇರುವಲ್ಲಿಗೆ ಕಳುಹಿಸಲು ಹೆದರಿಕೆ. ನಾನೇ ಹೋಗಬೇಕು. ಮಗನದ್ದು ಬೇರೆಯೇ ಸಮಸ್ಯೆ. ಆತನಿಗೂ ಅವನ ಹೆಂಡತಿಗೂ ಸರಿಬರ್ತಾ ಇಲ್ಲ. ಹಿರಿಯರೆಲ್ಲ ಕುಳಿತು ಬುದ್ಧಿ ಹೇಳಿದ್ದಾಯ್ತು. ಪ್ರಯೋಜನ ಇಲ್ಲ. ಮುಂದೇನು ಅನ್ನುವ ಪ್ರಶ್ನೆ. ಶಾಲೆಯಲ್ಲಿ ಒಬ್ಬರು ಅಧ್ಯಾಪಕರು ಕಡಿಮೆಯಿದ್ದಾರೆ. ರಜೆಯಿದ್ದರೂ ರಜೆಹಾಕಲು ಬರುವುದಿಲ್ಲ. ನನಗೆ ಮೊದಲಿನಿಂದಲೂ ಸಣ್ಣಪುಟ್ಟ ಶಬ್ದಕ್ಕೂ ರಾತ್ರಿ ಎಚ್ಚರವಾಗುತ್ತಿತ್ತು. ಈಗೀಗ ಹಾಗೆ ಎಚ್ಚರವಾದರೆ ಮತ್ತೆ ನಿದ್ದೆ ಬರುವುದಿಲ್ಲ. ಅದಕ್ಕೆ ಸರಿಯಾಗಿ ಮನೆಯೆದುರು ಹೊಸತಾದ ಬಾರ್ ತಲೆಯೆತ್ತಿದೆ. ಕೆಲವೊಮ್ಮೆ ರಾತ್ರಿಯಿಡೀ ನಿದ್ದೆಯಿಲ್ಲ. ಸಮಸ್ಯೆಗಳು ಒಂದೇ ಎರಡೇ... ಸೋತು ಹೋಗಿದ್ದೇನೆ. ಹೊಸ ಸಮಸ್ಯೆ ಅಪ್ಪಳಿಸದೆ ಒಂದೊಂದೇ ದಿನ ಮುಗಿದು ಹೋದರೆ ನನಗೆ ಅದೇ ದೊಡ್ಡ ನೆಮ್ಮದಿ. ನಿವೃತ್ತಿಯಾಗಬೇಕು. ಆಮೇಲೆ ನಿವೃತ್ತಿ ಸಂಬಳ ಅಬಾಧಿತವಾಗಿ ಕೈಗೆ ಬರಬೇಕು, ಎಲ್ಲ ಸಮಸ್ಯೆಗಳನ್ನು ಒಂದೊಂದಾಗಿ ಕೈಗೆತ್ತಿಕೊಂಡು ನಿವಾರಿಸಿಕೊಳ್ಳಬೇಕು, ಸದ್ಯಕ್ಕೆ ಇಷ್ಟೇ ನನ್ನ ಲಕ್ಷ್ಯ. ಸಂತೋಷದ ಕ್ಷಣಗಳೇ ಅಪರೂಪವಾಗಿರುವ ನನ್ನಲ್ಲಿ ಬಂದು ಆತ್ಮೀಯವಾಗಿ ಪ್ರಶಸ್ತಿ ಕೊಡಿಸುತ್ತೇನೆ ಎಂದು ಹೇಳಿದಿರಲ್ಲ, ಸಂತೋಷವಾಯಿತು. ಆದರೆ ಅದು ನನಗೆ ಬೇಡ' ಎಂದರು ಮಾಸ್ತರರು.

'ಕುಟುಂಬದ ಸಮಸ್ಯೆಗಳೆಲ್ಲ ಇದ್ದೇ ಇರುತ್ತವೆ ಸರ್. ಕಾಲ ಬಂದಾಗ ಎಲ್ಲ ಪರಿಹಾರವಾಗ್ತವೆ. ಈ ವರ್ಷ ನಿವೃತ್ತಿಯಾಗುತ್ತೀರಿ. ಮತ್ತೆ ಪ್ರಶಸ್ತಿಗೆ ಪರಿಗಣಿಸಲಿಕ್ಕಾಗುವುದಿಲ್ಲ. ನೀವು ಮನಸ್ಸು ಮಾಡಿ ಸಹಿ ಮಾಡಿ ಅರ್ಜಿ ಕೊಡಿ, ನಾನಿದ್ದೇನಲ್ಲ, ನೋಡಿಕೊಳ್ಳುತ್ತೇನೆ' ಅಂದರು ದಾಮೋದರ್.

'ನಿಮ್ಮ ಮೇಲಿನ ಪ್ರೀತಿಯಿಂದ ನಿಮ್ಮನ್ನು ಕ್ಲಾಸಿನಲ್ಲಿ ಕುಳ್ಳಿರಲು ನಾನು ಬಿಟ್ಟದ್ದು ಅಂದುಕೊಂಡಿರುವ ನಿಮಗೆ ನಾನು ಸತ್ಯ ಹೇಳುತ್ತೇನೆ. ನಮ್ಮ ಹೆಡ್ಮಾಸ್ಟರ್ ರಂಗನಾಥ್ ಗೊತ್ತಲ್ಲ, ಅವರೂ ದಲಿತರು. ಅವರಿಗೆ ದಲಿತ ಹುಡುಗರ ಮೇಲೆ ಅಪಾರ ಕಾಳಜಿ. ನನ್ನ ಟ್ಯೂಶನ್ ವ್ಯವಹಾರ ತಿಳಿದ ಅವರು ನಿಯಮ ತಿಳಿಸಿ ಸರ್ಕಾರಕ್ಕೆ ವರದಿ ಹಾಕಬೇಕಾಗುತ್ತದೆ ಅಂದಿದ್ದರು. ನಾನು ನನ್ನ ಸಮಸ್ಯೆ ವಿವರಿಸಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಇದೊಂದೇ ಮಾರ್ಗ, ನೀವು ಸಹಕರಿಸಬೇಕು ಅಂದೆ. ಅವರು ಗಂಭೀರವಾಗಿ ಯೋಚಿಸಿದ ನಟನೆ ಮಾಡಿ ಹಾಕಿದ ಕಂಡೀಶನ್ ಏನು ಗೊತ್ತಾ? ನಮ್ಮ ದಲಿತರ ಕೆಲ ಹುಡುಗರನ್ನು ಕಳಿಸ್ತೀನಿ, ಅವರನ್ನೂ ಅಲ್ಲಿ ಕೂರಿಸಿಕೊಳ್ಳಬೇಕು, ಇದಕ್ಕೆ ಒಪ್ಪಿಗೆಯಾದರೆ ಹೇಳಿ, ನಾನು ಸುಮ್ಮನಿದ್ದುಬಿಡುತ್ತೇನೆ ಅಂದಿದ್ದರು. ಒಪ್ಪಿಕೊಳ್ಳದೆ ನನಗೆ ಬೇರೆ ಮಾರ್ಗ ಇರಲಿಲ್ಲ. ನನಗೂ ಉಪಕಾರವಾಯಿತು, ನಿಮ್ಮಂತಹ ಹಲವು ದಲಿತರಿಗೂ ಉಪಯೋಗವಾಯಿತು. ದಲಿತರ ಏಳಿಗೆಯ ಸ್ಪಷ್ಟ ಕಲ್ಪನೆ ಇದ್ದವರು ಆತ. ಪಕ್ಕಾ ವ್ಯಾವಹಾರಿಕ ಮನುಷ್ಯನಾಗಿದ್ದ ನನ್ನಿಂದಲೂ ದಲಿತರಿಗೆ ಸಹಾಯವಾಗುವಂತೆ ನೋಡಿಕೊಂಡರು. ಇಂತಹ ಪ್ರಶಸ್ತಿ ಅಂಥವರಿಗೆ ಸಲ್ಲಬೇಕು' ಎಂದರು ಮಾಸ್ತರರು.

'ನಿಮ್ಮಿಬ್ಬರ ಅರ್ಜಿ ಕೂಡ ಹಾಕಿ ಬಿಡೋಣ ಸರ್. ಆಯ್ಕೆ ಸಮಿತಿಯಲ್ಲಿ ಇವರಿಬ್ಬರೂ ನನಗೆ ಬೇಕಾದವರು ಅನ್ನುತ್ತೇನೆ. ಕನಿಷ್ಠ ಒಬ್ಬರಿಗಾದರೂ ಸಿಕ್ಕೇ ಸಿಗುತ್ತೆ ಸರ್' ಅಂದರು ದಾಮೋದರ್.